ಇಂದು ದಿ 21**-04-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ ವಿ ಎಂ ವಕೀಲರಿಂದ 4 ಮತ್ತು 5 ನೇ ಪ್ರತಿವಾದಿಯರ ಪರಃ**

ನನ್ನ ತಂದೆಯ ಹೆಸರು ಬಿ ಹೆಚ್ ಗಿರಿಗೌಡ ಎಂದು ಇರುತ್ತದೆ. ಅವರು ಮೂಲತಃ ಹರಿಹರ ತಾಲ್ಲೂಕಿನ ಬನ್ನಿಕೋಡು ಗ್ರಾಮದವರು ಎಂದರೆ ಸರಿ . ನನ್ನ ತಂದೆಗೆ ನಾವು ಐದು ಜನ ಮಕ್ಕಳು . ಅವರೆಂದರೆ ನಾನು , ವಾದಿ , 2 ಮತ್ತು 3 ನೇ ಪ್ರತಿವಾದಿಯರು ಮತ್ತು ಬಿ ಜಿ ರಾಜಶೇಖರ. ನನ್ನ ತಂದೆ ದಿಃ 21-09-2013 ರಂದು ತೀರಿಕೊಂಡರು . ನಮ್ಮಲ್ಲಿ ವಾದಿ ಎಲ್ಲರಿಗಿಂತ ದೊಡ್ಡವರು . ನಂತರ 2 ನೇ ಪ್ರತಿವಾದಿ, ನಂತರ 3 ನೇ ಪ್ರತಿವಾದಿ , ನಂತರ ರಾಜಶೇಖರ , ಕೊನೆಯಲ್ಲಿ ನಾನು ಜನಿಸಿರುತ್ತೇನೆ. ದಿಃ 24-10-2020 ರಂದು ರಾಜಶೇಖರ ಕೋವಿಡ್ ನಲ್ಲಿ ತೀರಿಕೊಂಡರು. 4 ನೇ ಪ್ರತಿವಾದಿ ಆತನ ಹೆಂಡತಿ ಮತ್ತು 5 ನೇ ಪ್ರತಿವಾದಿ ಆತನ ಮಗ ಎಂದರೆ ಸರಿ .

ನಾನು ಎಂ ಟೆಕ್ ಕಲಿತಿರುತ್ತೇನೆ. ನಾನು ಬಿ ಇ ಪದವಿಯನ್ನು ಆರ್ ವೈ ಎಂ ಟಿ ಸಿ ಕಾಲೇಜು ಬಳ್ಳಾರಿಯಲ್ಲಿ ಓದಿರುತ್ತೇನೆ. 2003-04 ರಲ್ಲಿ ಬಿ ಇ ಪದವಿಗೆ ಸೇರಿರುತ್ತೇನೆ . ಹಾಸ್ಟೆಲ್ ನಲ್ಲಿ 2 ವರ್ಷ ಇದ್ದು , ಕಲಿತಿರುತ್ತೇನೆ. ನಂತರ ರೂಮ್ ಮಾಡಿಕೊಂಡು ಇದ್ದೇನು. 2010 ರಲ್ಲಿ ಬಿ ಇ ಮುಗಿಸಿದೆನು. 2010-11 ರಲ್ಲಿ ಎಂ ಟೆಕ್ ಶಿಕ್ಷಣಕ್ಕೆ ಬೆಂಗಳೂರಿನ ರೇವಾ ಯುನಿವರ್ಸಿಟಿಯಲ್ಲಿ ಸೇರಿದೆನು. 2 ವರ್ಷ ಬೆಂಗಳೂರಿನಲ್ಲಿ ಇದ್ದೆನು, 2012-13 ರಲ್ಲಿ ಎಂ ಟೆಕ್ ಶಿಕ್ಷಣ ಪೂರೈಸಿದೆನು. ನನ್ನ ಶಿಕ್ಷಣಕ್ಕೆ ಮನೆತನದ ಆದಾಯದಿಂದ ಖರ್ಚು ಮಾಡಿರುತ್ತಾರೆ ಎಂದರೆ ಸರಿ , ಸಾಕ್ಷಿ ನನ್ನ ತಂದೆ ಇದ್ದಾಗ ಅವರು ನೋಡಿಕೊಳ್ಳುತ್ತಿದ್ದನು ಎಂದು ಹೇಳುತ್ತಾರೆ.

ನನ್ನ ತಂದೆ ಜೀವಂತ ಇದ್ದಾಗ ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ವಾಸಮಾಡುತ್ತಿದ್ದೇವು ಎಂದರೆ ಸರಿ . ಸಾಕ್ಷಿ ನನ್ನ ಶಿಕ್ಷಣಕ್ಕೆ ನಾನು ಎಜುಕೇಶನ್ ಲೋನ್ ಮಾಡಿರುತ್ತೇನೆಂದು ಹೇಳುತ್ತಾರೆ. ನಾನು ಎಜುಕೇಶನ್ ಲೋನ್ ತೆಗೆದುಕೊಂಡ ಬಗ್ಗೆ ನನ್ನ ತಕರಾರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನೆ , ಸಾಕ್ಷಿ ರಶೀದಿ ಸಹ ಕೊಟ್ಟಿದ್ದೇನೆಂದು ಹೇಳುತ್ತಾರೆ. ನನ್ನ ತಕರಾರಿನಲ್ಲಿ , ಮುಖ್ಯ ವಿಚಾರಣೆಯಲ್ಲಿ ಎಜುಕೇಶನ್ ಲೋನ್ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಸಾಲದ ಬಗ್ಗೆ ತಿಳಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಷೆಡ್ಯೂಲ್ ಬಿ ಐಟಂ ನಂ. 3 ಆಸ್ತಿಯಲ್ಲಿ ನಾವೆಲ್ಲರೂ ವಾಸ ಇದ್ದೇವು ಎಂದರೆ ಸರಿ . ನನ್ನ ತಂದೆ ಮತ್ತು ಆತನ ಸಹೋದರರು ಮಾಡಿಕೊಂಡ ಪಾಲು ವಿಭಾಗದಲ್ಲಿ ಷೆಡ್ಯೂಲ್ ಎ ಐಟಂ ನಂ. 1 ರಿಂದ 14 ಮತ್ತು ಷೆಡ್ಯೂಲ್ ಬಿ ಯ ಐಟಂ ನಂ. 1 ರಿಂದ 3 ಆಸ್ತಿಗಳು ಅವರ ಹಿಸ್ಸೆಗೆ ಬಂದವು ಎಂದರೆ ಸರಿ . ಷೆಡ್ಯೂಲ್ ಬಿ ಐಟಂ ನಂ. 7 ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದು ಎಂದರೆ ಸರಿ . ನನ್ನ ತಂದೆ ತೀರಿಕೊಂಡ ನಂತರ ಷೆಡ್ಯೂಲ್ ಎ ಆಸ್ತಿಗಳಿಗೆ ಮತ್ತು ಐಟಂ ನಂ. 1 ರಿಂದ 3, 7 ಷೆಡ್ಯೂಲ್ ಬಿ ಆಸ್ತಿಗಳಿಗೆ 1 ನೇ ಪ್ರತಿವಾದಿ , ವಾದಿ , 2 , 3 , 6 ನೇ ಪ್ರತಿವಾದಿಯರು ಮತ್ತು ರಾಜಶೇಖರ ಇವರ ಹೆಸರುಗಳು ಸದರಿ ಆಸ್ತಿಗಳಿಗೆ ದಾಖಲಾಗಿರುತ್ತವೆ. ಷೆಡ್ಯೂಲ್ ಬಿ 4 ರಿಂದ 6 ಆಸ್ತಿಗಳು ರಾಜಶೇಖರ ಈತನ ಹೆಸರಿಗೆ ಇವೆ. ಸಾಕ್ಷಿ ಒಟ್ಟು ಕುಟುಂಬದಲ್ಲಿದಾಗ ಖರೀದಿ ಮಾಡಿದ್ದು ಎಂದ ಹೇಳುತ್ತಾರೆ. ಈಗ 4 ನೇ ಪ್ರತಿವಾದಿಗೆ ಹೆಸರಿಗೆ ಇವೆ. ರಾಜಶೇಖರ ತೀರಿಕೊಂಡ

ನಂತರ , ನಮ್ಮ ಹೆಸರನ್ನೂ ಸಹ ಈ ಆಸ್ತಿಗಳಿಗೆ ದಾಖಲು ಮಾಡಲು ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಷೆಡ್ಯೂಲ್ ಎ ಆಸ್ತಿಗಳಿಗೆ ಮತ್ತು ಐಟಂ ನಂ. 1 ರಿಂದ 3 ಷೆಡ್ಯೂಲ್ ಬಿ ಆಸ್ತಿಗಳಿಗೆ ನಮ್ಮ ಹೆಸರನ್ನು ದಾಖಲು ಮಾಡಿಕೊಳ್ಳಬೇಕಾದರೆ , ಈ ಐಟಂ ನಂ. 4 ರಿಂದ 6 ಆಸ್ತಿಗಳಿಗೆ ನಮ್ಮ ಹೆಸರುಗಳನ್ನು ದಾಖಲು ಮಾಡಲು ಅರ್ಜಿ ಕೊಡಲಿಲ್ಲ. 4 ನೇ ಪ್ರತಿವಾದಿ ತನ್ನ ಹೆಸರನು ಈ ಮನೆ ಆಸ್ತಿಗಳಿಗೆ ದಾಖಲು ಮಾಡಿಕೊಳ್ಳಬೇಕಾದ ಇವು ಒಟ್ಟು ಕುಟುಂಬದ ಆಸ್ತಿ , ನಮ್ಮ ಹೆಸರನ್ನೂ ಸಹ ದಾಖಲಿಸಿ ಎಂದು ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟಿದ್ದೇವು ಆದರೆ ಅದು ತಿರಸ್ಕಾರ ಆಗಿರುತ್ತದೆ. ಈ ಕುರಿತು ಈ ದಾವೆಯಲ್ಲಿ ಯಾವುದೇ ಹಿಂಬರಹ ಹಾಜರು ಪಡಿಸಿಲ್ಲ. ಅರ್ಜಿಯ ಪ್ರತಿ ಈ ದಾವೆಯಲ್ಲಿ ಹಾಜರು ಪಡಿಸಿಲ್ಲ . ಸಾಕ್ಷಿ ಪಂಚಾಯಿತಿಯಲ್ಲಿ ಅರ್ಜಿ ಕೊಡಲು ಹೋಗಿದ್ದೇವು ಅವರು ಸ್ವೀಕರಿಸಲಿಲ್ಲ ಎಂದು ಹೇಳುತ್ತಾರೆ. ಈ ವಿಷಯವನ್ನು ತಕರಾರಿನಲ್ಲಿ ತಿಳಿಸಿಲ್ಲ. ಸಾಕ್ಷಿ ಆದರೆ ಒಟ್ಟು ಕುಟುಂಬ ಆಸ್ತಿ ಎಂದು ಹೇಳಿದ್ದೇವೆಂದು ಹೇಳುತ್ತಾರೆ. ಪಿ ಡಿ ಓ ನಮ್ಮ ಅಜ್ಜಿ ಸ್ವೀಕರಿಸದೇ ಇದ್ದಾಗ ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ನಾನು ತರಳಬಾಳು ತಾಂತ್ರಿಕ ಮಹಾವಿದ್ಯಾಲಯ , ರಾಣಿಬೆನ್ನೂರಿನಲ್ಲಿ ಸಹಾಯಕ ಪ್ರಾಧ್ಯಾಪಕ ಎಂದು ಕೆಲಸ ಮಾಡುತ್ತಿದ್ದೇನೆ. 2013 ಆಗಸ್ಟ್ ರಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನಾನು ಕೆಲಸಕ್ಕೆ ಸೇರಿದಾಗ ನನ್ನ ತಿಂಗಳ ಸಂಬಳ ರೂ. 14,400 ಇತ್ತು. 2022 ರಲ್ಲಿ ಸುಮಾರು ರೂ. 18 ಸಾವಿರ ಇತ್ತು. ಈಗ 2025 ರಿಂದ ರೂ. 36,000 ಇದೆ. ನನಗೆ ಇಬ್ಬರೂ ಮಕ್ಕಳು. ನನ್ನ ಮಕ್ಕಳು

4 ನೇ ತರಗತಿಯಲ್ಲಿ ಮತ್ತು ಎಲ್ ಕೆ ಜಿ ಯಲ್ಲಿ ಓದುತ್ತಿದ್ದಾರೆ. ನನ್ನ ಮತ್ತು ರಾಜಶೇಖರ ಇವರ ಮದುವೆ ಒಟ್ಟಿಗೆ ಆಗಿರುತ್ತದೆ ಎಂದರೆ ಸರಿ . ದಾವಣಗರೆಯಲ್ಲಿ ಆಗಿರುತ್ತದೆ. ನನ್ನ ಹೆಂಡತಿ ಆಯುರ್ವೇದಿಕ್ ವೈದ್ಯೆ ಇರುತ್ತಾರೆ. ನನ್ನ ಹೆಂಡತಿ ಮೊದಲು ಕೂಡ್ಲಿಗಿಯಲ್ಲಿ ಕೆಲಸ ಮಾಡುತ್ತಿದ್ದರು. ಮದುವೆಯ ನಂತರ 5 ವರ್ಷ ಕೂಡ್ಲಿಗಿಯಲ್ಲಿ ಕೆಲಸ ಮಾಡಿರುತ್ತಾರೆ. ನಂತರ ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡರು , ಸಾಕ್ಷಿ ಅದು ಗುತ್ತಿಗೆ ಆಧಾರದ ಮೇಲೆ ಇತ್ತು ಎಂದು ಹೇಳುತ್ತಾರೆ. ಈಗಲೂ ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ .

ಮುಂದಿನ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.